Fax: 08282-256262 Phone No - 08282-256149
E-mail:kuvempuacademic@gmail.com Website: www.kuvempu.ac.in.

ಕುವೆಂಪು ವಿಶ್ವವಿದ್ಯಾಲಯ
ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನಸಹ್ಯಾದ್ರಿ,
ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ–3:ಬಿ.ಇಡಿ–57: 50 :2026–27 ದಿನಾಂಕ:07–04–2026

# ಪರಿಷ್ಕೃತ ಸುತ್ತೋಲೆ

ವಿಷಯ:– 2025–26ನೇ ಶೈಕ್ಷಣಿಕ ಸಾಲಿನ ಎರಡು ವರ್ಷಗಳ ಬಿ.ಇಡಿ. ಕೋರ್ಸಿನ ಪ್ರವೇಶಾತಿ ದಿನಾಂಕ ವಿಸ್ತರಿಸುವ ಬಗ್ಗೆ.

ಉಲ್ಲೇಖ:– 1. ವಿ.ವಿ. ಸುತ್ತೋಲೆ ಸಂಖ್ಯೆ:ಕುವಿ:ಶೈವಿ:ಎಸಿ–3:ಬಿ.ಇಡಿ–57:4119:2025–26, ದಿನಾಂಕ:29–01–2026.
2. ಕುವೆಂಪು ವಿಶ್ವವಿದ್ಯಾಲಯ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರು ಮತ್ತು ಪ್ರಶಿಕ್ಷಕರ ಸಂಘ (ರಿ) – ಇವರ ಪತ್ರ ದಿನಾಂಕ:27–03–2026.
3. ಬಿ.ಇಡಿ. ಕಾಲೇಜು ಪ್ರಾಂಶುಪಾಲರುಗಳ ಮನವಿ ದಿನಾಂಕ:27/31–03–2026.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06–04–2026.

*****

ಉಲ್ಲೇಖಿತ (1)ರ ಸುತ್ತೋಲೆಯಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಎರಡು ವರ್ಷಗಳ ಬಿ.ಇಡಿ. ಕೋರ್ಸಿಗೆ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಈಗಾಗಲೇ ಪರಿಚಲಿಸಲಾಗಿತ್ತು.

ಮುಂದುವರೆದು, ಸದರಿ ಮಾರ್ಗಸೂಚಿಯಲ್ಲಿ ಸೂಚಿಸಲಾಗಿದ್ದ ಪ್ರವೇಶಾತಿ ಕೊನೆಯ ದಿನಾಂಕ:30–03–2026 ಆಗಿದ್ದು ಸದರಿ ದಿನಾಂಕವನ್ನು ಬದಲಾವಣೆ ಮಾಡುವ ಸಂಬಂಧ ಉಲ್ಲೇಖ(2) ಮತ್ತು (3)ರಲ್ಲಿ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ **ಸದರಿ ದಿನಾಂಕವನ್ನು ದಂಡ ಶುಲ್ಕವಿಲ್ಲದಂತೆ ದಿನಾಂಕ:20–04–2026ರವರೆಗೆ ಮತ್ತು ದಿನಾಂಕ:21–04–2026 ರಿಂದ 30–04–2026ರವರೆಗೆ ರೂ.500/–ಗಳ ದಂಡ ಶುಲ್ಕದೊಂದಿಗೆ** ಪ್ರವೇಶಾತಿ ಪಡೆಯಲು ಅವಧಿಯನ್ನು ವಿಸ್ತರಿಸಲಾಗಿದೆ.

ಸರ್ಕಾರಿ ಹಾಗೂ ಆಡಳಿತ ಮಂಡಳಿ ಕೋಟಾದ ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಅನುಬಂಧ-I ರ ನಮೂನೆಯಲ್ಲಿ ವಿವರ ಪಟ್ಟಿಯೊಂದಿಗೆ ತ್ರಿಪ್ರತಿಗಳಲ್ಲಿ ವಿಶ್ವವಿದ್ಯಾಲಯದ ಪರಿಶೀಲನೆಗೆ **ದಿನಾಂಕ:05–05–2026 ರೊಳಗಾಗಿ ಸಲ್ಲಿಸಿ ವಿಶ್ವವಿದ್ಯಾಲಯದಿಂದ ಅನುಮೋದನೆ ಪಡೆಯತಕ್ಕದ್ದು. ತದನಂತರ, ಸಲ್ಲಿಸಿದ ಪ್ರವೇಶ ಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ. ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗುವ ಶೈಕ್ಷಣಿಕ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಪಾಲಿಸ ತಕ್ಕದ್ದು.**

ಉಳಿದಂತೆ, ಉಲ್ಲೇಖಿತ(1)ರ ಸುತ್ತೋಲೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ಸೂಚನೆ:** 2025–26ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಈಗಾಗಲೇ ದಿನಾಂಕ:02–03–2026ರಿಂದ ತರಗತಿಗಳು ಪ್ರಾರಂಭವಾಗಿದ್ದು, ಪ್ರವೇಶಾತಿ ದಿನಾಂಕ ವಿಸ್ತರಣೆಯಿಂದಾಗಿ ವಿದ್ಯಾರ್ಥಿಗಳಿಗೆ ಶೇ.75ರಷ್ಟು ಹಾಜರಾತಿಗೆ ತೊಂದರೆಯಾಗದಂತೆ ಹೆಚ್ಚುವರಿ ತರಗತಿಗಳೊಂದಿಗೆ ಹಾಜರಾತಿಯನ್ನು ಸರಿದೂಗಿಸುವುದು ಪ್ರಾಂಶುಪಾಲರ ಜವಾಬ್ದಾರಿಯಾಗಿರುತ್ತದೆ.

ಕುಲಸಚಿವರಿಂದ ಕರಡು
ಅನುಮೋದನೆಯಾಗಿದೆ.

Sujatha G.N. 7/4/26
ಉಪಕುಲಸಚಿವ

ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451.

ಗೆ,
ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಗಳು:
01 ಆಪ್ತ ಸಹಾಯಕರು: ಕುಲಪತಿ: ಕುಲಸಚಿವ: ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
**02 ಶ್ರೀ ಸಿದ್ದಲಿಂಗ ಜಿ. ಪಾಟೀಲ್, ನೋಡಲ್ ಅಧಿಕಾರಿಗಳು, UUCMS, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.**
03 ನಿರ್ದೇಶಕರು, ಯು.ಸಿ.ಸಿ.ಎಫ್. ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕ್ಕಾಗಿ.
04 ಕಛೇರಿ ಪ್ರತಿ.